ಅವನ ಸಾಮಾಜಿಕ ವರ್ಚಸ್ಸನ್ನು ತುಸು ಹೆಚ್ಚು ಮಾಡಿತ್ತು ಎಂದೇ ಅವನು ಭಾವಿಸಿದ್ದನು.

ಪ್ರಚಂಡನಾದ ರಾಘಪ್ಪ ಯಾರಿಗಾದರೂ ಅಂಜುತ್ತಿದ್ದರೆ ಅದು ಅವನ ಒಡಹುಟ್ಟಿದ ಅಕ್ಕ ಗಂಗವ್ವನಿಗೆ ಮಾತ್ರ. ಧಾರವಾಡಕ್ಕೆ ಬಂದ ಮೇಲೆ ಗಂಗವ್ವ ಮತ್ತು ಕಿಟ್ಟಿಯನ್ನು ಭೇಟಿಯಾಗುವ ರಾಘಪ್ಪನಿಗೆ ಹತ್ತು ವರ್ಷಗಳು ಸಂದರೂ, ಗಂಗವ್ವ ಹಳೆಯ ದ್ವೇಷವನ್ನು ಮರೆತಿಲ್ಲವೆಂಬುದು ವೇದ್ಯವಾಗುತ್ತದೆ. ರಾಘಪ್ಪನ ಮಗಳು ರತ್ನಳನ್ನು ಕಿಟ್ಟಿಗೇ ಕೊಟ್ಟು ಮದುವೆ ಮಾಡಬೇಕೆಂಬ ವಿಚಾರವನ್ನು ಲೋಕಾಭಿರಾಮವಾಗಿ ಆಡಿದರೂ ಗಂಗವ್ವ ಅದನ್ನು ತಿರಸ್ಕರಿಸುವಂತೆ ಮಾತು ಮರೆಸಿಬಿಡುತ್ತಾಳೆ. ಗಂಗವ್ವನ ದ್ವೇಷ ಮತ್ತು ತಿರಸ್ಕಾರವನ್ನು ಸೂಕ್ಷ್ಮವಾಗಿ ಅರಿತುಕೊಳ್ಳುವ ರಾಘಪ್ಪ, ರತ್ನಳನ್ನು ಕಿಟ್ಟಿಗೇ ಕೊಟ್ಟು ಮದುವೆ ಮಾಡಬೇಕೆಂದು ದೃಢ ನಿರ್ಧಾರ ಮಾಡುತ್ತಾನೆ.

ಗಂಗವ್ವನಿಗೆ ಕಿಟ್ಟಿಯೊಂದಿಗೆ ರತ್ನಳ ಮದುವೆ ಮಾಡಲು ಇಷ್ಟವಿಲ್ಲವೆಂಬ ವಿಷಯವೇ ರಾಘಪ್ಪನಿಗೆ ಒಂದು ಸವಾಲಿನಂತೆ ಕಾಣತೊಡಗುತ್ತದೆ ಮತ್ತು ಅವನು ಆ ಸವಾಲನ್ನು ಸ್ವೀಕರಿಸುತ್ತಾನೆ. ಕಿಟ್ಟಿ-ರತ್ನರ ಮದುವೆಯನ್ನು ಮಾಡಿಯೇ ತೀರಬೇಕೆಂಬುದು ರಾಘಪ್ಪನ ಹಠ ಏಕೆಂದರೆ ಇದು ಅವನಿಗೆ ಗಂಗವ್ವಳ ಮೇಲೆ ಗೆಲುವು ಸಾಧಿಸಲು ಸಿಕ್ಕ ಸುವರ್ಣಾವಕಾಶ! ದುಷ್ಟನಾದ ರಾಘಪ್ಪ, ಕಿಟ್ಟಿ-ರತ್ನರ ಮದುವೆ ಮಾಡುವ ಮೂಲಕ ಗಂಗವ್ವನಿಂದ ಅವಳ ಮಗನನ್ನು ಕಸಿಯುವ ಮತ್ತು ಆ ರೀತಿಯಲ್ಲಾದರೂ ಗಂಗವ್ವನಿಗೆ ಎಂದೂ ಮರೆಯಲಾರದ ಪೆಟ್ಟು ಕೊಡಬೇಕೆನ್ನುವ ಕುತಂತ್ರ ಮಾಡತೊಡಗುತ್ತಾನೆ. ಈ ತಂತ್ರ-ಪ್ರತಿತಂತ್ರಗಳು, ಕುತಂತ್ರಗಳೆಲ್ಲ ದೈನಂದಿನ ಜನಜೀವನದಲ್ಲಿ ಇಂದಿಗೂ ಗೋಚರಿಸುತ್ತ ರಾಘೋಬಾನನ್ನು ಇನ್ನಷ್ಟು ಹತ್ತಿರದವನನ್ನಾಗಿ ಮಾಡುತ್ತದೆ.

ಖಳನಾಯಕನಾದ ರಾಘಪ್ಪ ತನ್ನ ಕುತಂತ್ರಗಳ ಮೂಲಕ ಇನ್ನೇನು ಗಂಗವ್ವನ ಮೇಲೆ ಮೇಲುಗೈ ಸಾಧಿಸಿಬಿಟ್ಟ ಎಂಬ ಸಮಯದಲ್ಲೇ ಅವನ ತಂತ್ರಗಳಿಗೆ ಪ್ರತಿತಂತ್ರ ಹೂಡಬಲ್ಲ ಸಮರ್ಥ ಎದುರಾಳಿಯ ಪ್ರವೇಶವಾಗುತ್ತದೆ. ಸುಣ್ಣದಮನಿ ದೇಸಾಯರು ಗಂಗವ್ವನ ಹಿತಚಿಂತಕರು. ಗಂಗವ್ವನಿಂದ ರಾಘಪ್ಪನ ಪೂರ್ವಾಪರ ತಿಳಿದುಕೊಂಡ ದೇಸಾಯರು ಅವನು ಕಿಟ್ಟಿಯ ಮದುವೆಯ ಸಮಯದಲ್ಲಿ ಮೋಸ ಮಾಡಿ ಉಳಿಸಬೇಕೆಂದುಕೊಂಡ ವರದಕ್ಷಿಣೆಯ ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡಲು ಗಂಗವ್ವನಿಗೆ ಸಹಾಯ ಮಾಡುತ್ತಾರೆ.

ಮಗಳ ಮದುವೆಯ ಸಮಯದಲ್ಲಾದ ಅವಮಾನದಿಂದ ರಾಘಪ್ಪ ಇನ್ನಷ್ಟು ರೊಚ್ಚಿಗೇಳುತ್ತಾನೆ. ಆಪತ್ಕಾಲದಲ್ಲಿ ಐದು ನೂರು ರೂಪಾಯಿ ಕೊಟ್ಟು ರಾಘಪ್ಪನ ಮಾನ ಕಾಯುವ ಮೆಹಬೂಬಜಾನ್, ತನ್ನ ಆ ಕಾರ್ಯದಿಂದ ಜೀವಕ್ಕೆ ಎರವಾಗಬೇಕಾಗುತ್ತದೆ. ಮೆಹಬೂಬಜಾನಳ ಮರಣ ರಾಘಪ್ಪನನ್ನು ತೀವ್ರವಾಗಿ ಘಾಸಿಗೊಳಿಸುತ್ತದೆ. ಈಗ ರಾಘಪ್ಪನಿಗೆ ಗಂಗವ್ವ ಮಾತ್ರವಲ್ಲ ಅವಳಿಗೆ ಬೆಂಬಲ ನೀಡಿದ ದೇಸಾಯಿ ಕೂಡ ಶತ್ರು. ಎಷ್ಟು ಸಲ ಸೋತರೂ ಛಲ ಬಿಡದೆ ಮತ್ತೆ ಮತ್ತೆ ಹೋರಾಡುವ ಬಂಡುಕೋರ ಮನೋಭಾವದ ರಾಘಪ್ಪ ತನ್ನಂತಹ ಪ್ರಚಂಡನ ಎದುರಾಳಿಯಾಗಲು ದೇಸಾಯಿಯಂತಹ ವ್ಯಕ್ತಿಯೇ ಯೋಗ್ಯ ಎಂದು ನಿರ್ಧರಿಸಿ ಮತ್ತಷ್ಟು ಹುರುಪಿನಿಂದ ದೇಸಾಯಿಯನ್ನು ಸೋಲಿಸಲು ಸನ್ನದ್ಧನಾಗುತ್ತಾನೆ.

ಗಂಗವ್ವನಿಂದ ಕಿಟ್ಟಿಯನ್ನು ದೂರ ಮಾಡಿದಂತೆ ದೇಸಾಯರಿಂದ ಅವರ ಮಗ ವಸಂತನನ್ನು ದೂರ ಮಾಡಲು ಹವಣಿಸುವ ರಾಘಪ್ಪ ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ಅಪ್ರಬುದ್ಧನೂ, ಷೋಕಿಲಾಲನೂ ಆದ ವಸಂತ ಚಾಣಾಕ್ಷನಾದ ರಾಘಪ್ಪನ ಮಾತಿನ ಮೋಡಿಗೆ ಮರುಳಾಗುತ್ತಾನೆ. ನಾಟಕ ಕಂಪನಿ, ರಾಜಾ ಪಾರ್ಟು ಎಂದೆಲ್ಲ ವಸಂತನ ತಲೆಯಲ್ಲಿ ಇಲ್ಲದ ವಿಚಾರ ತುಂಬಿ ದೇಸಾಯರ ಆಸ್ತಿಯಲ್ಲಿ ಪಾಲು ಕೇಳುವಂತೆ ಮಾಡುತ್ತಾನೆ. ಪುಕ್ಕಲನಾದ ವಸಂತ ಆಸ್ತಿಯಲ್ಲಿ ಪಾಲು ಕೇಳಲು ಹೋಗಿ ದೇಸಾಯರಿಂದ ಏಟು ತಿಂದು ರಾಘಪ್ಪನ ಸ್ನೇಹವನ್ನೇ ಬಿಡುತ್ತಾನೆ. ಸತತ ಸೋಲು ಮತ್ತು ನಿರಾಶೆಯಿಂದ ಕಂಗೆಡುವ ರಾಘಪ್ಪ ಇಷ್ಟಾದರೂ ಬುದ್ಧಿ ಕಲಿಯುವುದಿಲ್ಲ. ವಿಶ್ವವಿಜೇತನೆಂದು ಬೀಗುವ ರಾಘಪ್ಪನಿಗೆ ಸೋಲು ಯಾವತ್ತೂ ಸಹ್ಯವಲ್ಲ.

ಸದಾ ಕೀಟಕುಪದ್ರವ ಕೊಡುತ್ತ, ಸ್ವಂತ ಮಗನನ್ನು ದೂರ ಮಾಡಲು ಯತ್ನಿಸಿದ ರಾಘಪ್ಪನಿಗೆ ದೇಸಾಯರು ಹುಚ್ಚ ವೆಂಕಟರಾಯನ ಪತ್ರ ಕಳಿಸುವ ಮೂಲಕ ಸೂಕ್ಷ್ಮವಾಗಿ ಬಿಸಿ ಮುಟ್ಟಿಸುತ್ತಾರೆ. ಗಂಗವ್ವನ ಅಪೇಕ್ಷೆ ಮತ್ತು ಕಿಟ್ಟಿಯ ಮದುವೆಯ ಕಾಲಕ್ಕೆ